ದಿಃ06.08.2022 OS No. 45/2019 PW-1

ದಿಃ06.08.2022 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎಸ್ ಬಿ ಡಿ ವಕೀಲರಿಂದ

ನಾನು ಉಪನ್ಯಾಸಕನಾಗಿದ್ದು ನಿವೃತ್ತಿ ಹೊಂದಿರುತ್ತೇನೆ. ನನಗೆ ಪ್ರತಿವಾದಿಯ ಪರಿಚಯವಿದೆ. ಅವರು ನನ್ನ ಸಂಬಂಧಿಕರು. ನಾನು 2000 ನೇ ಇಸವಿಯಲ್ಲಿ ಡಿ ಟಿ ರಾಮ ವಸತಿ ನಿಲಯವನ್ನು ನಡೆಸುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ಮಾತುಕತೆಯು ಪ್ರತಿವಾದಿಯ ಮನೆಯ ಮುಂದೆ ಆಗಿರುತ್ತದೆ. ಆ ಸಮಯದಲ್ಲಿ ವಿ ವಿ ಶ್ರೀಕಂಠಯ್ಯ ಮತ್ತು ಪುಟ್ಟ ಮಲ್ಲಯ್ಯ ಎಂಬುವವರು ಇದ್ದರು. ಸದರಿ ಪುಟ್ಟ ಮಲ್ಲಯ್ಯರವರು ಮೃತರಾಗಿರುತ್ತಾರೆ. ಜುಲೈ-2000 ರಂದು ಮಾತುಕತೆ ಆಗಿತ್ತು ಎಂದು ಹೇಳುವ ಸಂಬಂಧವಾಗಿ ದಿನಾಂಕ ನೆನಪಿರುವುದಿಲ್ಲ. ನಾನು ಪ್ರತಿವಾದಿಯ ದಾವ ಸ್ವತ್ತಿನ ಮಾಲೀಕತ್ವದ ಬಗ್ಗೆ ಕರಾರಿನ ಪೂರ್ವದಲ್ಲಿ ತಿಳಿದುಕೊಂಡಿದ್ದೆ. ಪ್ರತಿವಾದಿಯ ಹೆಸರಿನಲ್ಲಿ ದಾವಾ ಸ್ವತ್ತಿನ ಖಾತೆ ಇತ್ತು. ಪ್ರತಿವಾದಿಯು 2000 ಇಸವಿಯ ಪೂರ್ವದಲ್ಲಿ ಅಂದರೆ ಮಾತುಕತೆ ಪೂರ್ವದಲ್ಲಿ ದಾವಾ ಸ್ವತ್ತಿನ ಮನೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ನಾನು ಎರಡು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳನ್ನು ನಗದಾಗಿ ಕೊಟ್ಟಿರುತ್ತೇನೆ. ಆ ರೀತಿ ಹಣ ಕೊಟ್ಟ ಬಗ್ಗೆ ಆ ಸಮಯದಲ್ಲಿ ಪತ್ರ ವ್ಯವಹಾರ ಆಗಿರಲಿಲ್ಲ. ಸದರಿ ಹಣ ಕೊಟ್ಟ ಸಂಬಂಧವಾಗಿ ಪತ್ರ ವ್ಯವಹಾರ ಮಾಡಲು ನನಗೆ ತೊಂದರೆ ಇರಲಿಲ್ಲ, ಪ್ರತಿವಾದಿ ನನಗೆ ಗೊತ್ತಿದ್ದರು. 2000 ಇಸವಿಯಲ್ಲಿ ಯಾವುದೇ ಕ್ರಯಪತ್ರ ಆಗಿರುವುದಿಲ್ಲ.

2000 ರಿಂದ 2008 ರ ವರೆಗೆ ಪ್ರತಿವಾದಿಯಿಂದ ಕ್ರಯಪತ್ರ ಬರೆಸಿಕೊಳ್ಳಲು ತೊಂದರೆ ಇತ್ತೆ ಎಂದರೆ ಪ್ರತಿವಾದಿಯು ಊರಿನಲ್ಲಿ ಇರಲಿಲ್ಲ ಬೇರೆ ಕಡೆ ಹೋಗುತ್ತಿದ್ದರು. ಒಂದು ವೇಳೆ ಕ್ರಯದ ವ್ಯವಹಾರ ಆಗಿದ್ದರೆ 2000 ರಿಂದ 2008 ರ ಅವಧಿಯಲ್ಲಿ ನಾನು ಪ್ರತಿವಾದಿಗೆ ನೋಟೀಸ್ ಮೂಲಕ ತಿಳಿಸುತ್ತಿದ್ದೆ ಎಂದರೆ ನಾನು

ಪ್ರತಿವಾದಿಗೆ ಮೌಖಿಕವಾಗಿ ಹೇಳಿದ್ದು ಅವರು ಸರ್ಕಾರಿ ನೌಕರರು ಆಗಿರುವುದರಿಂದ ಅವರು ಬೇರೆ ಕಡೆ ಹೋಗುತ್ತಿದ್ದರು. ನಾನು ದಾವಾ ಸ್ವತ್ತಿನ ಬಾಡಿಗೆದಾರನಾಗಿದ್ದು ಪ್ರತಿವಾದಿಯು ದಾವಾ ಸ್ವತ್ತಿನ ಮಾಲೀಕರು ಎಂದರೆ ಸರಿಯಲ್ಲ.

ದಿ 16-10-2018 ರಂದು ನಾನು ವಕೀಲರ ಮೂಲಕ ಪ್ರತಿವಾದಿಗೆ ನೋಟೀಸ್ ಜಾರಿ ಮಾಡಿಸಿದ್ದೆ. ಆ ದಿನಾಂಕದಂದು ಪ್ರತಿವಾದಿ ಒಬ್ಬರಿಗೆ ಮಾತ್ರ ನೋಟೀಸ್ ನೀಡಿದ್ದೆ. ನಾನು ಸದರಿ ದಿನಾಂಕದಂದು ಪಿಡಿಒರವರಿಗೂ ಸಹ ನೋಟೀಸ್ ನೀಡಿದ್ದೆ ಎಂದರೆ ಆ ನಂತರ ನೀಡಿರುತ್ತೇನೆ. ನಾನು ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವ ಯಾವುದೇ ದರದ್ದು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ್ದ ನೋಟೀಸಿಗೆ ಪ್ರತಿವಾದಿಯು ಪ್ರತ್ಯುತ್ತರ ನೋಟೀಸ್ ನೀಡಿದ್ದರು ಎಂದರೆ ಸರಿ. ಸದರಿ ಪ್ರತ್ಯುತ್ತರ ನೋಟೀಸಿನಲ್ಲಿ ಕರಾರು ಪತ್ರಕ್ಕೂ ತನಗೂ ಸಂಬಂಧವಿಲ್ಲ ಎಂದು ಪ್ರತಿವಾದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಿ 17-01-2019 ರಲ್ಲಿ ಪ್ರತಿವಾದಿಯು ನನಗೆ ತಿಳುವಳಿಕೆ ನೋಟೀಸನ್ನು ನೀಡಿದ್ದರು ಎಂದರೆ ಸರಿ. ಬಾಡಿಗೆ ಮೊತ್ತವನ್ನು ನೀಡದೆ ಇರುವುದರಿಂದ ದಾವಾ ಸ್ವತ್ತಿನ ಮನೆಯನ್ನು ಖಾಲಿ ಮಾಡುವಂತೆ ಸದರಿ ನೋಟೀಸಿನಲ್ಲಿ ಹೇಳಿದ್ದರು ಎಂದರೆ ನಾನು ಬಾಡಿಗೆದಾರನಾಗಿರುವುದಿಲ್ಲ. ಸದರಿ ನೋಟೀಸಿಗೆ ನಾನು ಉತ್ತರ ನೀಡಿರುತ್ತೇನೆ. ಆ ರೀತಿ ಪ್ರತ್ಯುತ್ತರ ನೋಟಿಸಿನ ಪ್ರತಿಯನ್ನು ನಾನು ನನ್ನ ವಕೀಲರಿಗೆ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ನೋಟೀಸಿಗೆ ಉತ್ತರ ನೀಡದೆ ಇದ್ದಾಗ ಪ್ರತಿವಾದಿಯು ಇದೆ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ.49/2019 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನಾನು ಪ್ರತಿವಾದಿಯ ನೋಟೀಸಿಗೆ ಉತ್ತರ ನೀಡಿರುತ್ತೇನೆ. ನಾನು ಸದರಿ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೇನೆ ಎಂದರೆ ಸರಿ.

ಪ್ರತಿವಾದಿಯು ಮಹಿಳೆ ಆಗಿದ್ದು ಅವರಿಗೆ ಸೇರಿರುವ ದಾವ ಸ್ವತ್ತನ್ನು ಕಬಳಿಸಲು ಸುಳ್ಳು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕರಾರು ಪತ್ರದಲ್ಲಿ ಸಾಕ್ಷಿದಾರರ ಸಂಪೂರ್ಣ ವಿಳಾಸವನ್ನು

ತಿಳಿಸಿಲ್ಲ ಎಂದರೆ ಸರಿ. 2017-18 ರಲ್ಲಿ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿ, ಆದರೆ ಸ್ವಾಧೀನದಲ್ಲಿ ನಾನು ಇರುತ್ತೇನೆ. ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಕರಾರಿನ ವ್ಯವಹಾರ ಆಗದೆ ಇದ್ದರೂ ನಾನು ದಾಖಲೆಗಳನ್ನು ಸೃಷ್ಠಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.